C.R.P.67

Form No.4 (Civil)
Deposition Sheets
(R.P.No.57)

## 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆ: 277/2018

| | | |
|---|---|---|
| | | **ಪ್ರಾಸಾ.9** **ಚಾಸಾ.15** |
| **ಸಾಕ್ಷಿದಾರರ ಹೆಸರು** | : | ಚಿಕ್ಕಣ್ಣ |
| **ತಂದೆಯ ಹೆಸರು** | : | ಚಿಕ್ಕಯ್ಯ |
| **ವಯಸ್ಸು** | : | 47 ವರ್ಷಗಳು |
| **ಉದ್ಯೋಗ** | : | ಕೂಲಿ ಕೆಲಸ |
| **ವಾಸ** | : | ನವಗ್ರಾಮ, ಕನಕಪುರ, ಬೆಂಗಳೂರು. |

## ಪ್ರಮಾಣ ವಚನ ಬೋಧಿಸಿದ ದಿನಾಂಕ: 05.10.2023

## ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:

ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತಿಲ್ಲ. ಈಗ ತೋರಿಸಿದ ಅಮಾನತು ಪಂಚನಾಮೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ಅಮಾನತು ಪಂಚನಾಮೆಯನ್ನು ನಿಶಾನೆ ಪಿ–14 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ–14(ಎ) ಎಂದು ಗುರುತಿಸಲಾಯಿತು.

2. ಸುಮಾರು 4 ವರ್ಷದ ಹಿಂದೆ ನಾನು ಕೆಲಸ ಮುಗಿಸಿಕೊಂಡು ದಿನ್ನೆಪಾಳ್ಯದ ಹತ್ತಿರ ಬರುತ್ತಿದ್ದಾಗ ಪೊಲೀಸರವರು ಮಹಜರ್ ಮಾಡುತ್ತಿದ್ದರು, ಆಗ ಪೊಲೀಸರವರು ಸದರಿ ದಾಖಲೆಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ಪೊಲೀಸರವರು ಯಾವ ವಿಚಾರಕ್ಕೆ ನನ್ನ ಸಹಿ ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಹಾಕುವಾಗ ನ್ಯಾಯಾಲಯದ ಮುಂದೆ ಇರುವ ಆರೋಪಿತರು

ಸ್ಥಳದಲ್ಲಿ ಇರಲಿಲ್ಲ. ನಿಶಾನೆ ಪಿ-14 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಿಶಾನೆ ಪಿ-14 ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

1. ದಿನಾಂಕ 19.12.2017 ರಂದು ನನ್ನನ್ನು ಮತ್ತು ಚಾಸಾ-16 ರವರನ್ನು ಕಗ್ಗಲೀಪುರ ಪೊಲೀಸ್ ಠಾಣೆಗೆ ಕರೆಸಿದ್ದರು, ಆ ಸಮಯದಲ್ಲಿ ಪೊಲೀಸರವರು ನನಗೆ 1 ನೇ ಆರೋಪಿಯನ್ನು ತೋರಿಸಿ, ಆತ ಮೃತ ಅನೀಲ್ ನನ್ನು ಕೊಲೆ ಮಾಡಿರುತ್ತಾನೆ, 1 ನೇ ಆರೋಪಿ ಕೃತ್ಯಕ್ಕೆ ಬಳಸಿದ ಒಂದು ದ್ವಿಚಕ್ರ ವಾಹನ ಮತ್ತು ಎರಡು ಮೊಬೈಲ್ ಫೋನ್ ಗಳನ್ನು ಹಾಜರುಪಡಿಸಿವುದಾಗಿ ಹೇಳಿರುತ್ತಾನೆ , ಸದರಿ ವಸ್ತುಗಳನ್ನು ಅಮಾನತುಪಡಿಸಿಕೊಳ್ಳುವ ಸಮಯದಲ್ಲಿ ನೀವು ಪಂಚರಾಗಿ ಹಾಜರಿರಬೇಕು ಎಂದು ತಿಳಿಸಿದ ಮೇರೆಗೆ ನಾನು ಒಪ್ಪಿರುತ್ತೇನೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ಠಾಣೆ ಮುಂದೆ ನಿಲ್ಲಿಸಿದ ಕೆಎ-50-ಕ್ಯೂ-6693 ಒಂದು ದ್ವಿಚಕ್ರ ವಾಹನವನ್ನು ತೋರಿಸಿ ಮತ್ತು ಎರಡು ಮೊಬೈಲ್ ಫೋನ್ ಗಳನ್ನು ಪೊಲೀಸರ ಮುಂದೆ ಹಾಜರುಪಡಿಸಿದನು ಎಂದರೆ ಸರಿಯಲ್ಲ. ನಂತರ

ಪೊಲೀಸರವರು ಸದರಿ ದ್ವಿಚಕ್ರ ವಾಹನ ಮತ್ತು ಮೊಬೈಲ್ ಫೋನ್ ಗಳನ್ನು ಅಮಾನತುಪಡಿಸಿಕೊಂಡು ನಿಶಾನೆ ಪಿ–4 ರಂತೆ ರಾತ್ರಿ 9.15 ಗಂಟೆಯಿಂದ ರಾತ್ರಿ 10.00 ಗಂಟೆಯವರೆಗೆ ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿಯಲ್ಲ.

2. ನನಗೆ ಈಗ ಓದಿ ಹೇಳಿದ ರೀತಿ ಅಂದರೆ (ದಿನಾಂಕ 19.12.2017 ರಂದು-------------ಸಹಿ ಮಾಡಿರುತ್ತೇನೆ) ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.15 ಎಂದು ಗುರ್ತಿಸಲಾಯಿತು. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಮತ್ತು 1 ನೇ ಆರೋಪಿಯನ್ನು ನೋಡಿದ್ದರು ಸಹ ಮತ್ತು ನಿಶಾನೆ ಪಿ–14 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದರು ಸಹ ಈಗ 1 ನೇ ಆರೋಪಿಗೆ ಅನುಕೂಲ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಆರ್.ಎಸ್. ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿಃ**

ಆರೋಪಿತರ ಪರ ವಕೀಲರು ತಮ್ಮದು ಪಾಟೀ-ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.